## ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.

### ಸಿ.ಸಿ ನಂ: 2628/2022

ಪಿ.ಡಬ್ಲ್ಯೂ-3
ಸಿ.ಡಬ್ಲ್ಯೂ-4

ಹೆಸರು : ಮಂಜುನಾಥ ಬೆಳಗಪ್ಪನವರ

ವಯಸ್ಸು : **38** ವರ್ಷ

ಉದ್ಯೋಗ : ಅಬಕಾರಿ ಪೆದೆ, ಅಬಕಾರಿ ಕಚೇರಿ ಖಾನಾಪೂರ

ವಾಸ : ಖಾನಾಪೂರ

ದಿನಾಂಕ 20-02-2024 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :** ಸಸಅ ರವರಿಂದ

ಕಳೆದ 6 ವರ್ಷಗಳಿಂದ ನಾನು ಖಾನಾಪೂರ ಅಬಕಾರಿ ಕಚೇರಿಯಲ್ಲಿ ಅಬಕಾರಿ ಪೆದೆಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ದಿನಾಂಕ 11.09.2022 ರಂದು ಚಾ.ಸಾ.1 ರವರು ನನ್ನನ್ನು ಲೊಂಡಾ ರೇಲ್ವೆ ನಿಲ್ದಾಣಕ್ಕೆ ಕರೆದುಕೊಂಡು ಹೋಗಿದ್ದು, ಆಗ ವಾಸ್ಕೊ ದಿ ಗಾಮಾ ಶಾಲಿಮಾರ ಎಕ್ಸಪ್ರೆಸ್ ರೈಲು ಲೊಂಡಾ ನಿಲ್ದಾಣಕ್ಕೆ ಬಂದಿದ್ದು, ಸದರಿ ರೈಲಿನ ಬಿ-3 ಕೋಚ್ ನಲ್ಲಿ ತಪಾಸಣೆ ಮಾಡಿದಾಗ, ಸೀಟ ನಂ.43 ರಲ್ಲಿ ಕುಳಿತಿದ್ದ ವ್ಯಕ್ತಿ ತನ್ನ ಎರಡು ಕ್ಯಾರಿಬ್ಯಾಗನಲ್ಲಿ ಅಕ್ರಮವಾಗಿ ಮದ್ಯದ ಬಾಟಲಿಗಳನ್ನು ಸಾಗಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ. ಸದರಿ ವ್ಯಕ್ತಿಯ ಬಳಿ ಇದ್ದ ಕ್ಯಾರಿಬ್ಯಾಗಗಳನ್ನು ಪಂಚರ ಸಮಕ್ಷಮ ಚಾ.ಸಾ.1 ರವರು ಪರಿಶೀಲಿಸಿದಾಗ, 750 ಮಿಲಿಯ 66 ರಾಯಲ್ ಚಾಲೆಂಜ ವಿಸ್ಕಿ ಬಾಟಲಿಗಳು, 750 ಮಿಲಿಯ ಬ್ಲಂಡರ್ಸ್ಪ್ರೈಡ್ ವಿಸ್ಕಿಯ 55 ಬಾಟಲಿಗಳು ಕಂಡುಬಂದಿರುತ್ತದೆ. ನಂತರ ಪಂಚರ ಸಮಕ್ಷಮ ಮಹಜರ ಕ್ರಮ ಜರುಗಿಸುವ ಮೂಲಕ ಸದರಿ ಮದ್ಯದ ಬಾಟಲಿಗಳನ್ನು ಜಪ್ತುಪಡಿಸಿಕೊಂಡಿದ್ದು, ರಾಸಾಯನಿಕ ಪರೀಕ್ಷಾ ವರದಿಗಾಗಿ ತಲಾ ಒಂದೊಂದು ಬಾಟಲಿಗಳನ್ನು ಪ್ರತ್ಯೇಕವಾಗಿ ತೆಗೆದು ಸೀಲು ಮಾಡಿ, ಪಂಚರ ಹಾಗೂ ಚಾ.ಸಾ.1 ರವರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ. ನಂತರ ಆರೋಪಿಯನ್ನು ವಶಕ್ಕೆ ಪಡೆದು ಕಚೇರಿಗೆ ವಾಪಸ್ಸಾಗಿದ್ದು, ಈ ಬಗ್ಗೆ ಚಾ.ಸಾ.1 ರವರು ಸ್ವ ಫಿರ್ಯಾದವನ್ನು ತಯಾರಿಸಿ ಪ್ರಕರಣ ದಾಖಲಿಸಿರುತ್ತಾರೆ.

**(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋಡಿದ್ದು ಸಮಯ ನೀಡಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)**.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.